ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 14-04-1994.

# *ಸ್ನೇಹದ ರಿಟರ್ನ್ ಕೊಡುವುದು ಅರ್ಥಾತ್ ತಮ್ಮನ್ನು ಪರಿವರ್ತನೆ ಮಾಡಿಕೊಳ್ಳುವುದು*

(स्नेह का रिटर्न है - स्वयं को टर्न (परिवर्तन) करना)

**ಶುಭ ಸಂಕಲ್ಪಗಳ ಶ್ರೇಷ್ಠತೆಯನ್ನು ತಿಳಿಸುವ, ಸ್ನೇಹಿ ಮತ್ತು ಶಕ್ತಿಮೂರ್ತಿ ಬಾಪ್‌ದಾದಾ ತನ್ನ ಸ್ನೇಹಿ ಮಕ್ಕಳ ಸಭೆಯನ್ನು ನೋಡಿ ಮಾತನಾಡುತ್ತಿದ್ದಾರೆ.**

ಇಂದು ಸ್ನೇಹಿ ಹಾಗೂ ಶಕ್ತಿಮೂರ್ತಿ ಬಾಪ್‌ದಾದಾರವರು ನಾಲ್ಕೂಕಡೆಯಿರುವ ತನ್ನ ಸ್ನೇಹಿ ಮಕ್ಕಳನ್ನು ನೋಡುತ್ತಿದ್ದಾರೆ. ಸಾಕಾರದಲ್ಲೆಷ್ಟು ಸಭೆಯಿದೆ. ಅದಕ್ಕಿಂತಲೂ ಹೆಚ್ಚು ಆಕಾರಿ ರೂಪದ ಸಭೆಯಾಗಿದೆ. ಸಾಕಾರ ರೂಪಧಾರಿ ಮತ್ತು ಆಕಾರ ರೂಪಧಾರಿ ಮಕ್ಕಳೆಲ್ಲರೂ ಬಾಪ್‌ದಾದಾರವರ ಸ್ನೇಹ ಬಾಹುಗಳಲ್ಲಿ ಸಮಾವೇಶವಾಗಿದ್ದಾರೆ ಸ್ನೇಹ ಭುಜಗಳು ಎಷ್ಟು ದೊಡ್ಡವು ನದಿ ಸಾಗರದೊಂದಿಗೆ ಮಿಲನವಾದಂತೆ ನಾಲ್ಕು ಕಡೆ ಇರುವ ಮಕ್ಕಳು ಸ್ನೇಹ ಭುಜಗಳಲ್ಲಿ ಸಮಾವೇಶವಾಗಿದ್ದಾರೆ. ಸ್ನೇಹ ಭುಜಗಳು, ಸ್ನೇಹದ ಸಾಗರನು ಬೇಹದ್ದಿನವರಾಗಿದ್ದಾರೆ ಎಲ್ಲಾ ಮಕ್ಕಳು ನಂಬರ್‌ವಾರ್ ಆಗಿದ್ದರೂ ಸಹ ಸ್ನೇಹದಲ್ಲಂತೂ ಎಲ್ಲರೂ ಬಂಧಿಸಲ್ಪಟ್ಟಿದ್ದಾರೆ. ಸರ್ವ ಮಕ್ಕಳಲ್ಲಿ ಬಾಪ್‌ದಾದಾರವರ ಸ್ನೇಹವು ಸಮಾವೇಶವಾಗಿದೆ. ಇದೇ ಶಕ್ತಿಯಿಂದಲೇ ಎಲ್ಲರೂ ವೃದ್ಧಿಯಾಗುತ್ತಾ ಹಾರುತ್ತಿದ್ದಾರೆ. ಸ್ನೇಹದ ಶಕ್ತಿಯು ಸರ್ವ ಮಕ್ಕಳನ್ನು ತನುವಿನಿಂದ. ಮನಸ್ಸಿನಿಂದ, ಹೃದಯದಿಂದ ತಂದೆಯ ಸಮೀಪಕ್ಕೆ ಕರೆತರುತ್ತದೆ. ಸ್ನೇಹದ ವಿಮಾನವು ಸೆಕೆಂಡಿನ ಗರಿಯಿಂದ ತಂದೆಯ ಸಮೀಪ ಕರೆತರುತ್ತದೆ. ಜ್ಞಾನ, ಯೋಗ, ಧಾರಣೆ- ಇದರಲ್ಲಿ ಯಥಾಶಕ್ತಿ ನಂಬರ್‌ವಾರ್ ಆಗಿದ್ದಾರೆ. ಆದರೆ ಸ್ನೇಹದಲ್ಲಂತೂ ಪ್ರತಿಯೊಬ್ಬರೂ ತನ್ನನ್ನು ನಂಬರ್‌ವನ್ ಅನುಭವ ಮಾಡುತ್ತಾರೆ. ಸ್ನೇಹವು ಸರ್ವಮಕ್ಕಳಿಗೂ ಬ್ರಾಹ್ಮಣ ಜೀವನವನ್ನು ಪ್ರಧಾನ ಮಾಡಲು ಮೂಲ ಆಧಾರವಾಗಿದೆ. ನಿರಂತರ ಯೋಗಿ ಆಗಿದ್ದೀರಾ? ನಿರಂತರ ಜ್ಞಾನ ಸ್ವರೂಪರಾಗಿದ್ದೀರಾ? ಜ್ಞಾನಿಯಲ್ಲ ಆದರೆ ಜ್ಞಾನಸ್ವರೂಪರಾಗಿದ್ದೀರಾ? ಇದನ್ನು ಎಲ್ಲಾ ಮಕ್ಕಳೊಂದಿಗೆ ಒಂದುವೇಳೆ ಕೇಳಿದರೆ ಯೋಚಿಸುತ್ತಾರೆ. ಹೇಳುತ್ತಾರೆ- ಹೌದಲ್ಲವೆ. ನಿರಂತರ ಧಾರಣಾ ಸ್ವರೂಪರಾಗಿದ್ದೀರಾ ಎಂದು ಕೇಳಿದರೆ ಏನು ಹೇಳುವರು? ಲಕ್ಷ್ಯವಂತು ಇದ್ದೇ ಇದೆ. ಆದರೆ ನಿರಂತರ ಸ್ನೇಹಿಯಾಗಿದ್ದೀರಾ ಎಂದು ಕೇಳಿದರೆ "ಹಾಂ ಜಿ" ಎಂದು ಹೇಳುತ್ತಾರೆ. ಇದರಲ್ಲಿ ಎಲ್ಲರೂ ಉತ್ತೀರ್ಣರಾಗಿದ್ದಾರೆ. ಕೆಲವರು ಪಾಸ್-ವಿತ್-ಆನರ್ ಆಗಿದ್ದಾರೆ. ಕೆಲವರು ಉತ್ತೀರ್ಣರಾಗಿದ್ದಾರೆ. ಆಗಿದ್ದೀರಲ್ಲವೆ! ಡಬಲ್ ವಿದೇಶಿ. ಭಾರತದವರು ಎಲ್ಲರೂ ಉತ್ತೀರ್ಣರಾಗಿದ್ದೀರಾ? ಪಾಸ್ ಆಗದಿದ್ದರೆ ಪಾಸ್(ಸಮೀಪ) ಬರುವುದಿಲ್ಲ. ಪಾಸ್ ಅಂದರೆ ಸಮೀಪ ಬರುವುದರ ಅರ್ಥ ಉತ್ತೀರ್ಣರಾಗಿರುವುದನ್ನು ಸಿದ್ಧ ಮಾಡುತ್ತದೆ. ಸ್ನೇಹದ ಅರ್ಥವೇ ಆಗಿದೆ- ಪಾಸ್ ಸಮೀಪ ಇರುವುದು ಮತ್ತು ಪಾಸ್ ಆಗುವುದು ಮತ್ತು ಪ್ರತಿಯೊಂದು ಪರಿಸ್ಥಿತಿಯನ್ನು

ಬಹಳ ಸಹಜವಾಗಿ ಪಾಸ್ ಮಾಡುವುದು ಹಾಗಾದರೆ ಎಲ್ಲರೂ ಈ ಮೂರರಲ್ಲಿಯೂ ಪಾಸ್ ಆಗಿದ್ದೀರಲ್ಲವೇ? ಪಾಸ್ ಮಾಡುವುದೂ ಸಹ ಸಹಜವಲ್ಲವೇ? ಅಥವಾ ಪಾಸ್ ಮಾಡುವುದರಲ್ಲಿ ಕೆಲವೊಮ್ಮೆ ಕಷ್ಟ, ಕೆಲವೊಮ್ಮೆ ಸಹಜವಾಗುವುದೇ? ಪಾಸ್(ಸಮೀಪ) ಇರುವುದರಲ್ಲಿ ಆನಂದವೇ ಆನಂದವಿದೆ ಮತ್ತು ಪಾಸ್ ಮಾಡುವುದರಲ್ಲಿ ನಂಬರ್‌ವಾರ್ ಆಗಿದ್ದೀರಾ ಅಥವಾ ಎಲ್ಲರೂ ನಂಬರ್‌ವನ್ ಆಗಿದ್ದೀರಾ? ನೋಡಿ, ನಂಬರ್‌ವನ್ ಎಂದು ಹೇಳುತ್ತಿಲ್ಲ. ಎಲ್ಲರೂ ಶಾಂತವಾಗಿದ್ದೀರೆಂದರೆ ಏನೋ ಇದೆ. ಆದರೆ, ಸಮಯಾನುಸಾರ ಸದಾ ಸ್ನೇಹದ ಶಕ್ತಿಯಿಂದ ಪಾಸ್ ಮಾಡುವುದು ಸಹಜವಾಗಿಬಿಡುತ್ತದೆ. ಅಂದಮೇಲೆ ಪಾಸ್ ಆಗುವುದೇನು, ಪಾಸ್ ಆಗಿಬಿಟ್ಟಿರುವಿರಿ- ಇದರ ಪರಿಪಕ್ವ ನಿಶ್ಚಯವೂ ಇದೆ. ಕೇವಲ ಪುನರಾವರ್ತನೆ ಮಾಡಬೇಕು ಅಷ್ಟೇ ಇಷ್ಟು ಅಚಲ ನಿಶ್ಚಯವಿದೆಯೇ? ದೂರ ಕುಳಿತಿದ್ದರೂ ಸಹ ಎಲ್ಲರೂ ಸಮೀಪವಿದ್ದೀರಲ್ಲವೇ! ಹೃದಯ ಸಿಂಹಾಸನ ಅಧಿಕಾರಿಗಳು ಅಲ್ಲವೇ! ಕೆಲವರು ನಯನಗಳ ಮಣಿ(ಕಣ್ಮಣಿ) ಆಗಿದ್ದಾರೆ. ಕೆಲವರು ಹೃದಯ ಸಿಂಹಾಸನಾಧಿಕಾರಿ ಆಗಿದ್ದಾರೆ. ಅತಿ ಸಮೀಪದಲ್ಲಿ ನಯನವಿದೆ ಹಾಗೂ ಹೃದಯವಿದೆ. ತಾವೆಲ್ಲರೂ ಓಂ ಶಾಂತಿ ಭವನದಲ್ಲಿ ಕುಳಿತುಕೊಂಡಿಲ್ಲ ಆದರೆ ಬಾಪ್‌ದಾದಾರವರ ಹೃದಯ ಸಿಂಹಾಸನದಲ್ಲಿ ಅಥವಾ ನಯನಗಳಲ್ಲಿ ಕಣ್ಮಣಿಗಳಾಗಿ ಸಮಾವೇಶವಾಗಿದ್ದೀರಿ. ಹೀಗಿರುವವರೆಂದಿಗೂ ದೂರವಾಗುವುದಿಲ್ಲ.

ಈ ವರ್ಷದಲ್ಲಿ ಏನು ಮಾಡುವಿರಿ? ಹೇಳಬೇಕಾದರೆ ಈ ವರ್ಷದ ಮಿಲನದ ಅಂತಿಮ ಬಾರಿ ಎಂದು ಹೇಳುತ್ತೀರಿ ಆದರೆ ಅಂತ್ಯ. ಆದಿಯ ನೆನಪನ್ನು ಹೆಚ್ಚಾಗಿ ತರಿಸುತ್ತದೆ. ಆದಿ. ಮಧ್ಯದ ನೆನಪು ತರಿಸುತ್ತದೆ ಆದರೆ ಅಂತ್ಯವು ಆದಿಯ ನೆನಪನ್ನು ತರಿಸುತ್ತದೆ. ಹಾಗಾದರೆ ಇದು ಅಂತ್ಯವಲ್ಲ  ಆದಿಯಾಗಿದೆ. ತೀವ್ರಗತಿಯಲ್ಲಿ ಹಾರಲು ಆದಿಯಾಗಿದೆ. ಆತ್ಮ ಸ್ವರೂಪ, ಅನಾದಿ ಸ್ವರೂಪದ ತೀವ್ರ ಗತಿ ಏನಾಗಿದೆ? ಎಷ್ಟೊಂದು ತೀವ್ರ ಗತಿಯಲ್ಲಿದೆ! ವರ್ತಮಾನದ ಭಿನ್ನ-ಭಿನ್ನ ವಿಜ್ಞಾನದ ಸಾಧನಗಳ ತೀವ್ರಗತಿಗಿಂತಲೂ ತೀವ್ರಗತಿಯಿದೆ. ವಿಜ್ಞಾನದ ಸಾಧನಗಳ ಗತಿಯಂತು ವಿಜ್ಞಾನದ್ದಾಗಿದೆ. ಅದರ ಮೂಲಕ ಗತಿಯನ್ನು ತುಂಡರಿಸಬಹುದು, ನಿಯಂತ್ರಣ ಮಾಡಬಹುದು ಆದರೆ ಅತ್ಮನ ಗತಿಯನ್ನು ಈಗಿನವರೆಗೂ ಯಾರೂ ಸಹ ಹಿಡಿಯಲು ಸಾಧ್ಯವಾಗಿಲ್ಲ. ಸಾಧ್ಯವಾಗುವುದೂ ಇಲ್ಲ. ಇದರಲ್ಲಿಯೇ ವಿಜ್ಞಾನವು ತನ್ನನ್ನು ಅನುತ್ತೀರ್ಣ ಆಗಿದ್ದೇವೆಂದು ತಿಳಿಯುತ್ತದೆ. ಎಲ್ಲಿ ವಿಜ್ಞಾನವು ಅನುತ್ತೀರ್ಣವಾಗಿದೆಯೋ ಅಲ್ಲಿ ಶಾಂತಿಯ ಶಕ್ತಿಯಿಂದ ಏನು ಮಾಡಲು ಬಯಸುತ್ತೀರೋ ಅದನ್ನು ಮಾಡಬಹುದು. ಅಂದಮೇಲೆ ಅತ್ಮನ ಶಕ್ತಿಯ ಹಾರುವ ತೀವ್ರಗತಿಯ ಆರಂಭ ಮಾಡಿರಿ, ಭಲೆ ಸ್ವಪರಿವರ್ತನೆಯಲ್ಲಿ, ಯಾರದೇ ವೃತ್ತಿಯ ಪರಿವರ್ತನೆಯಲ್ಲಿ ಅಥವಾ ವಾಯುಮಂಡಲದ ಪರಿವರ್ತನೆ ಆಗುವುದರಲ್ಲಿ ಅಥವಾ ಸಂಬಂಧ-ಸಂಪರ್ಕದ ಪರಿವರ್ತನೆಯಲ್ಲಾದರೂ ಈಗ ತೀವ್ರಗತಿಯನ್ನು ತರಬೇಕು. ಇದರ ಚಿಹ್ನೆಯು ಯೋಚಿಸಿದಿರಿ ಮತ್ತು ಅದಾಯಿತು ಎಂಬಂತೆ ಇರುತ್ತದೆ. ಆದರೆ ಯೋಚಿಸಿದ್ದೆವು, ಆಗಿಬಿಡುತ್ತದೆ ಎಂಬಂತೆ ಆಗಬಾರದು ಯೋಚಿಸಿದಿರಿ ಮತ್ತು ಆಯಿತು, ಸಂಕಲ್ಪ-ಮಾತು-ಕರ್ಮ ಮೂರೂ ಒಟ್ಟೊಟ್ಟಿಗೆ ಶ್ರೇಷ್ಠವಾಗಿರಲಿ ವ್ಯರ್ಥ ಅಥವಾ ಉಲ್ಟಾಸಂಕಲ್ಪದ ಪರಿಶೀಲನೆ ಮಾಡಿದಾಗ ಅದರ ಗತಿಯು ಬಹಳ ತೀವ್ರವಾಗಿರುತ್ತದೆ. ಈಗೀಗ ಸಂಕಲ್ಪ ಬಂದಿತು. ಈಗೀಗ ಮಾತನಾಡಿದಿರಿ. ಈಗೀಗ ಮಾಡಿಬಿಟ್ಟೆವು- ಈ ರೀತಿಯಲ್ಲಿ ತೀವ್ರತೆಯಿಂದ ಆಗುತ್ತದೆ. ಆ ಆವೇಶದ ಗತಿಯು ಎಷ್ಟು ತೀವ್ರವಾಗಿರುತ್ತದೆ ಎಂದರೆ ಅದರಲ್ಲಿ ಶ್ರೇಷ್ಠ ಸಂಕಲ್ಪ, ಕರ್ಮ ಮರ್ಯಾದೆ, ಬ್ರಾಹ್ಮಣ ಜೀವನದ ಮಹಾನತೆಯ

ಜಾಗೃತಿಯನ್ನೂ ಸಮಾಪ್ತಿಯಾಗಿಬಿಡುತ್ತದೆ. ವ್ಯರ್ಥ ಆವೇಶ ಸತ್ಯತೆಯ ಸ್ಮೃತಿ, ಯಥಾರ್ಥತೆಯ ಸ್ಮೃತಿಯನ್ನೂ ಸಮಾಪ್ತಿ ಮಾಡಿಬಿಡುತ್ತದೆ, ಮತ್ತೆ ಸ್ವಲ್ಪ ಸಮಯದ ನಂತರ ಯಾವಾಗ ಜಾಗರೂಕತೆಯಲ್ಲಿ ಬರುತ್ತಾರೆಯೋ ಆಗ ಯೋಚಿಸುತ್ತಾರೆ-ಮಾಡಬಾರದಿತ್ತು. ಯಥಾರ್ಥವಲ್ಲ ಆದರೆ ಆ ಆವೇಶದ ಸಮಯದಲ್ಲಿ ಯಥಾರ್ಥ ಪರಿಚಯನ್ನು ಪರಿವರ್ತಿಸಿ ಆಯಥಾರ್ಥವನ್ನೇ ಯಥಾರ್ಥವೆಂದು ಅನುಭವ ಮಾಡುತ್ತಾರೆ. ಆದ್ದರಿಂದ ವ್ಯರ್ಥದ ಆವೇಶ, ತಿಳುಳಳಿಕೆಯನ್ನು ಸಮಾಪ್ತಿ ಮಾಡಿಬಿಡುತ್ತದೆ. ಅಂದಮೇಲೆ ಈ ವರ್ಷದಲ್ಲಿ ಎಲ್ಲಾ ಮಕ್ಕಳು ವಿಶೇಷವಾಗಿ ವ್ಯರ್ಥದಿಂದ ಅವಿದ್ಯಾ ಆಗಿರಿ. ತಾವು ತಮ್ಮ ಸತ್ಯಯುಗೀ ರಾಜ್ಯದಲ್ಲಿದ್ದಾಗ ವ್ಯರ್ಥ ಅಥವಾ ಮಾಯೆಯಿಂದ ಮುಗ್ಧ ಅಥವಾ ಅವಿದ್ಯಾ ಆಗಿದ್ದಿರಿ ಆದ್ದರಿಂದ ದೇವತೆಗಳಿಗೆ ಮಹಾನ್ ಆತ್ಮರು, ಸಂಪೂರ್ಣರು ಎಂದು ಹೇಳುತ್ತಾರೆ. ಅದೇರೀತಿ ತಮ್ಮ ಆ ಸಂಸ್ಕಾರವನ್ನು ಸ್ಮೃತಿಸ್ವರೂಪ ಮಾಡಿಕೊಳ್ಳಿರಿ ವ್ಯರ್ಥದ ಅವಿದ್ಯಾ ಸ್ವರೂಪರಾಗಿರಿ. ಸಮಯ, ಶ್ವಾಸ, ಮಾತು, ಕರ್ಮ, ಎಲ್ಲದರಲ್ಲಿಯೂ ಅವಿದ್ಯಾ ಅರ್ಥಾತ್ ಮುಗ್ಧರಾಗಿರಿ. ಯಾವಾಗ ವ್ಯರ್ಥದ ಅವಿದ್ಯಾ ಆಗಿಬಿಡುತ್ತೀರೋ ಆಗ ದಿವ್ಯತೆಯು ಸ್ವತಹವಾಗಿ, ಸಹಜವಾಗಿಯೇ ಅನುಭವವಾಗುವುದು ಮತ್ತು ಅನುಭವ ಮಾಡಿಸುತ್ತದೆ. ಪುರುಷಾರ್ಥವನ್ನಂತು ಮಾಡುತ್ತಿದ್ದೇವೆ.... ಇದನ್ನೇ ಈಗಿನವರೆಗೂ ಯೋಚಿಸಬಾರದು. ಪುರುಷನು ಈ ರಥದ ಮೇಲೆ ಸವಾರಿ ಮಾಡುತ್ತಿದ್ದಾನೆ ಅಂದಮೇಲೆ ಪುರುಷನಾಗಿ ರಥದ ಮೂಲಕ ಮಾಡಿಸುವುದಕ್ಕೆ ಪುರುಷಾರ್ಥ ಎಂದು ಹೇಳಲಾಗುವುದು. ಪುರುಷಾರ್ಥ ನಡೆಯುತ್ತಿದೆ. ಅಲ್ಲ ಆದರೆ ಪುರುಷಾರ್ಥಿಯು ಸದಾ ಹಾರುತ್ತಿರುತ್ತಾನೆ ಎನ್ನಬೇಕು. ಇದಕ್ಕೆ ಯಥಾರ್ಥ ಪುರುಷಾರ್ಥಿ ಎಂದು ಹೇಳಲಾಗುವುದು. ಪುರುಷಾರ್ಥವೆಂದರೆ ಒಂದು ಬಾರಿ ಮಾಡುವ ತಪ್ಪನ್ನೇ ಮತ್ತೆ-ಮತ್ತೆ ಮಾಡುತ್ತಿರುವುದಲ್ಲ, ಈ ರೀತಿ ಪುರುಷಾರ್ಥದ ಪದವನ್ನು ನೆಪಕ್ಕಾಗಿ ಉಪಯೋಗಿಸಬಾರದು. ಯಥಾರ್ಥ ಪುರುಷಾರ್ಥಿಯಾಗಬೇಕು. ಸ್ವಭಾವವೂ ಸ್ವಾಭಾವಿಕವಾಗಿರಲಿ. ಅತಿ ಸಹಜವಾಗಿರಲಿ. ಈಗ ಪರಿಶ್ರಮವನ್ನು ಬದಿಗಿಡಬೇಕು. ಅಲ್ಪಕಾಲದ ಆಧಾರಗಳ ಆಶ್ರಯವನ್ನಂತೂ ಬದಿಗಿಟ್ಟಿದ್ದೀರಿ. ಆ ಅಲ್ಪಕಾಲದ ಆಶ್ರಯವನ್ನೀಗ ಬಿಟ್ಟುಬಿಡಿ. ಎಲ್ಲಿಯವರೆಗೆ ಈ ಆಶ್ರಯವಿರುತ್ತದೆಯೋ ಅಲ್ಲಿಯವರೆಗೆ ಸದಾ ತಂದೆಯ ಆಶ್ರಯವು ಅನುಭವವಾಗಲು ಸಾಧ್ಯವಿಲ್ಲ ಮತ್ತು ತಂದೆಯ ಆಶ್ರಯವಿಲ್ಲದಿರುವ ಕಾರಣ ಅಲ್ಪಕಾಲದ ಆಧಾರಗಳನ್ನೇ ಆಶ್ರಯವನ್ನಾಗಿ ಮಾಡಿಕೊಳ್ಳುತ್ತೀರಿ. ಅದು ಭಲೆ ತಮ್ಮ ಸ್ವಭಾವ, ಸಂಸ್ಕಾರಗಳಾಗಿರಬಹುದು ಅಥವಾ ಪರಿಸ್ಥಿತಿಗಳಾಗಿರಬಹುದು. ಇವೆಲ್ಲವೂ ಅಲ್ಪಕಾಲದ ತೋರ್ಪಡಿಕೆಯಾಗಿದೆ. ಮೋಸ ಮಾಡುವಂತಹದ್ದಾಗಿದೆ. ಇದರಲ್ಲಿಯೇ ಇದ್ದುಬಿಡಬಾರದು. ತಂದೆಯ ಅಶ್ರಯವೇ ಛತ್ರಛಾಯೆ(ಶ್ರೀರಕ್ಷೆ) ಆಗಿದೆ. ಅಲ್ಪಕಾಲದ ವಿಷಯಗಳು ಮೋಸಪೂರಿತವಾಗಿವೆ. ಮಾಯೆಯ ಬಹಳ ಮಧುರಾತಿ ಮಧುರವಾದ ಮಾತುಗಳನ್ನು ಕೇಳಿರುತ್ತೀರಿ, ಬಹಳಷ್ಟು ಕೇಳಿದ್ದೀರಿ. ಹೇಗೆ ದ್ವಾಪರದ ಶಾಸ್ತ್ರಗಳನ್ನು ತಯಾರು ಮಾಡುವವರು ಕಟ್ಟುಕಥೆಗಳನ್ನು ಬರೆಯುವುದರಲ್ಲಿ ಬಹಳ ಬುದ್ಧಿವಂತರಾಗಿದ್ದಾರೆ. ಎಷ್ಟೊಂದು ಮಧುರ ಮಧುರವಾದ ವಿಷಯಗಳನ್ನು ಮಾಡಿದ್ದಾರೆ. ಹಾಗಾದರೆ ಈಗ ಈ ವಿಷಯಗಳನ್ನು ಕಟ್ಟಬಾರದು. ಇದರಲ್ಲಂತೂ ಒಬ್ಬರಿಗಿಂತ ಒಬ್ಬರು ಬುದ್ಧಿವಂತರಾಗಿದ್ದಾರೆ. ವಿಷಯಗಳನ್ನು ತಯಾರು ಮಾಡಬಾರದು ವಿಷಯಗಳನ್ನು ನೋಡಬಾರದು, ವಿಷಯಗಳನ್ನು ಮಾಡಬಾರದು ಮತ್ತೆ ಇನ್ನೇನು ಮಾಡಬೇಕು? ತಂದೆಯನ್ನು ನೋಡಿ, ತಂದೆಯ ಸಮಾನ ಮಾಡಬೇಕು. ತಂದೆಯ ಸಮಾನ ತಯಾರಾಗಬೇಕು. ತಮ್ಮಮುಂದೆ ಯಾವುದಾದರೂ ವಿಷಯಗಳು ಬಂದಾಗ ಒಂದು ಸೆಕೆಂಡಿನಲ್ಲಿ ವಿಷಯಗಳನ್ನು ತಯಾರು ಮಾಡಲು ಬರುತ್ತಿದೆ. ಆದರೆ

ಮಾಯೆಯ ಗತಿಯೂ ತೀವ್ರವಿದೆಯಲ್ಲವೆ ಇಂತಹ ಸುಂದರ ರೂಪದ ವಿಷಯಗಳನ್ನು ಕಟ್ಟಿಬಿಡುತ್ತಾರೆ. ಅದನ್ನು ಕೇಳುತ್ತಾ ತಂದೆಯವರಿಗೂ ನಗು ಬರುತ್ತದೆ. ಆದರೆ ಅನ್ಯರು ಈ ವಿಷಯಗಳಲ್ಲಿ ಪ್ರಭಾವಿತರಾಗಿಬಿಡುತ್ತಾರೆ. ಇದಂತು ಸರಿಯಾಗಿದೆ. ಬಹಳ ಚೆನ್ನಾಗಿದೆ. ಇವರ ಮಾತಂತೂ ಸರಿಯೆನಿಸುತ್ತಿದೆ ಮತ್ತು ತಾವೂ ಸಹ ಸರಿ ಎನಿಸುತ್ತೀರಿ ಆದರೆ ಸಮಯದ ತೀವ್ರ ಗತಿಯನ್ನು ನೋಡುತ್ತಾ, ಈಗ ಈ ಆಧಾರಗಳಿಂದ ತೀವ್ರಗತಿಯಲ್ಲಿ ಹಾರಬೇಕು. ಈ ರೀತಿ ಅನೇಕ ಪ್ರಕಾರದ ವಿಷಯಗಳು ವ್ಯರ್ಥ ರಿಜಿಸ್ಟರ್‌ಅನ್ನು ರೋಲ್ ಮಾಡುತ್ತಿರುತ್ತದೆ. ರೋಲ್‌ನ ಮೇಲೆ ರೋಲ್ ಆಗುತ್ತಿರುತ್ತದೆ ಆದ್ದರಿಂದ ಇದೆಲ್ಲದರಿಂದ ಅವಿದ್ಯಾ ಆಗಿರಿ. ಈ ಅವಿದ್ಯಾ ಸ್ಥಿತಿಯಿಂದ ಮಾಡಿ ಮಾಡಲ್ಪಟ್ಟ ಸೇವೆಯ ವೇದಿಕೆಯು ತಮ್ಮ ಮುಂದೆ ಬರುತ್ತದೆ. ಈ ವರ್ಷದಲ್ಲಿ ಯಥಾರ್ಥ ಪುರುಷಾರ್ಥದ ಪ್ರತ್ಯಕ್ಷಫಲದ ಗುರುತಾಗಿದೆ- ತಯಾರಿರುವ ಸೇವೆಯು ತಮ್ಮ ಮುಂದೆ ಬರುವುದು ವ್ಯರ್ಥವನ್ನು ಎದುರಿಸುವುದನ್ನು ನಿಲ್ಲಿಸಿಬಿಟ್ಟರೆ ಸೇವೆಯ ಅವಕಾಶಗಳು ತಮ್ಮ ಮುಂದೆ ಬರುತ್ತದೆ. ತಾವೆಲ್ಲರೂ ಅನೇಕ ವರ್ಷಗಳಿಂದ ಸೇವೆಗೆ ನಿಮಿತ್ತರಾಗಿದ್ದೀರಿ. ಈಗ ಅನ್ಯರನ್ನೂ ನಿಮಿತ್ತ ಮಾಡುವ ಸೇವೆಗೆ ನಿಮಿತ್ತರಾಗಿರಿ, ಮೈಕ್ ಅವರಾಗಲಿ ಮತ್ತು ತಾವು ಮೈಟ್(ಶಕ್ತಿ/ಆಧಾರ) ಆಗಿರಿ. ಬಹಳ ಸಮಯ ತಾವು ಮೈಕ್ ಆಗಿದ್ದಿರಿ. ಈಗ ಅನ್ಯರನ್ನು ಮೈಕ್ ಮಾಡಿರಿ, ತಾವು ಮೈಟ್ ಆಗಿರಿ. ತಮ್ಮ ಶಕ್ತಿಯಿಂದ ಮೈಕ್ ನಿಮಿತ್ತವಾಗಲಿ, ಇದನ್ನೇ ತೀವ್ರಗತಿಯ ವಿಮಾನ ಎಂದು ಕರೆಯುತ್ತಾರೆ ಏನು ಮಾಡಬೇಕೆಂದು ತಿಳಿಯಿತೇ? ತೀವ್ರ ವಿಮಾನವಾಗಿದ್ದೀರಲ್ಲವೆ. ಅಥವಾ ಕೆಲವೊಮ್ಮೆ ತೀವ್ರ ಕೆಲವೊಮ್ಮೆ ನಿಧಾನವೇ? ಸದಾ ತೀವ್ರಗತಿಯ ವಿಮಾನದಿಂದ ಹಾರುತ್ತಾ ಇರುತ್ತೀರಿ, ಮೋಡಗಳನ್ನು ನೋಡಿ ಗಾಬರಿಯಾಗಬಾರದು, ಈ ಮಾತುಗಳೇ ಮೋಡಗಳಾಗಿವೆ. ಇದನ್ನು ಸೆಕೆಂಡಿನಲ್ಲಿ ಕ್ರಾಸ್ ಮಾಡಿರಿ. ವಿಧಿಯನ್ನು ತಿಳಿದುಕೊಂಡು ಸೆಕೆಂಡಿನಲ್ಲಿ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳಿರಿ. ಒಂದು ಕಡೆ ರಿದ್ಧಿ-ಸಿದ್ಧಿಯ ಫೋರ್ಸ್ ಇದೆ ಮತ್ತು ತಮ್ಮದು ವಿಧಿಯಿಂದ ಕೂಡಿರುವ ಸಿದ್ಧಿಯ ಫೋರ್ಸ್. ರಿದ್ಧಿ-ಸಿದ್ಧಿಯು ಅಲ್ಪಕಾಲದ್ದಾಗಿದೆ ಮತ್ತು ವಿಧಿ-ಸಿದ್ಧಿಯು ಸದಾಕಾಲಕ್ಕಾಗಿ ಇರುವುದಾಗಿದೆ.

ಈಗ ಬಾಪ್‌ದಾದಾರವರು ಇಂತಹ ಗ್ರೂಪ್‌ಅನ್ನು ಬಯಸುತ್ತಾರೆ- ಅದರಲ್ಲಿ ಸದಾ ಮನಸ್ಸಿನಲ್ಲಿ, ವಾಣಿಯಲ್ಲಿ, ಮಾತಿನಲ್ಲಿ, ಸಂಪರ್ಕದಲ್ಲಿ ಯಾರು ಅರ್ಜುನರಾಗುವರು! (ನಂಬರ್‌ವನ್) ನಾನು ಅರ್ಜುನನಾಗಿದ್ದೇನೆ. ನಾನೇನು ಮಾಡುವೆನು ಅದನ್ನು ನೋಡಿ ಅನ್ಯರು ಮಾಡುವರು( ನಾನು ದೇಹಾಭಿಮಾನದ್ದಲ್ಲ. ನಾನು ಶ್ರೇಷ್ಠ ಆತ್ಮನಾಗಿದ್ದೇನೆ). ಈ ಗಾಯನವೇನಿದೆಯೋ ಅವರು ನಂಬರ್‌ನ್ ಅರ್ಥಾತ್ ಅರ್ಜುನ, ಅಲೌಕಿಕ ಜನರು ಇಂತಹ ಗ್ರೂಪ್‌ನ್ನು ಬಾಪ್‌ದಾದಾರವರು ನೋಡಬಯಸುತ್ತಾರೆ. ವಿಷಯಗಳನ್ನೂ ನೋಡಬಾರದು. ಅನ್ಯರನ್ನೂ ನೋಡಬಾರದು. ಅನ್ಯರ ವ್ಯರ್ಥವನ್ನೂ ಕೇಳಬಾರದು ಸಂಕಲ್ಪ, ಮಾತು ಮತ್ತು ಕರ್ಮ ಎಲ್ಲದರಲ್ಲಿಯೂ ಅಲೌಕಿಕ, ದಿವ್ಯತೆಯ ಹೊಳಪಿರಲಿ ಇಂತಹವರಿಗೆ ಅರ್ಜುನ ಅಥವಾ ಅಲೌಕಿಕ ಜನ ಎಂದು ಹೇಳಲಾಗುತ್ತದೆ. ಈ ವರ್ಷದಲ್ಲಿ ಇಂತಹ ಗ್ರೂಪ್ ತಯಾರಾಗುತ್ತದೆಯೇ ಅಥವಾ ಮುಂದಿನ ವರ್ಷದಲ್ಲಿ ತಯಾರಾಗುವುದೇ? ಯಾರು ಈ ಗ್ರೂಪ್‌ನಲ್ಲಿ ಬರಲು ಬಯಸುವಿರಿ ಅವರು ಕೈ ಮೇಲೆ ಮಾಡಿರಿ. ನಾನಾಗಬೇಕು. ನಾನು ಅರ್ಜುನನಾಗಿದ್ದೇನೆ ಎನ್ನುವವರು ಕೈಯೆತ್ತಿರಿ. ನಂತರದಲ್ಲಿ ಅಂತಹ ಯಾವುದೇ ಸಮಾಚಾರ ಬರಬಾರದು- ಏನು ಮಾಡಲಿ. ಆಗಿಬಿಡುತ್ತದೆ..... ಸಂದರ್ಭವೇ ಹಾಗಿತ್ತು... ಸಹಯೋಗ ಸಿಗಲಿಲ್ಲ. ಆಶೀರ್ವಾದಗಳು ಸಿಗುವುದಿಲ್ಲ... ಆಶ್ರಯವೇ ಸಿಗುವುದಿಲ್ಲ. ಯಾರಿಗೆ ಸ್ವಲ್ಪ ಸಮಯ ಬೇಕೋ ಅವರು ಕೈಯೆತ್ತಿರಿ.

ಒಂದೆರಡು ತಿಂಗಳು ಬೇಕಾ ಅಥವಾ ಒಂದು ವರ್ಷ ಬೇಕಾ! ಯಾರೆಲ್ಲರೂ ಗ್ರೂಪ್‌ನಲ್ಲಿ ಬರುತ್ತಾರೆಯೋ ಅವರಬಳಿ ಕೇಳಿ. ನಂತರ ಫಲಿತಾಂಶವನ್ನು ತಿಳಿಸಿರಿ ನಿಮಿತ್ತ ಶಿಕ್ಷಕಿಯರಂತು ಮೊದಲು. ಏಕೆಂದರೆ ಯಾರು ನಿಮಿತ್ತರಾಗಿರುತ್ತಾರೆಯೋ ಅವರ ಸೂಕ್ಷ್ಮ ವಾಯುಮಂಡಲದ ತರಂಗಗಳು ಅವಶ್ಯವಾಗಿ ಹರಡುತ್ತದೆ. ಪದಮಪಟ್ಟು ಪುಣ್ಯವೂ ಸಿಗುತ್ತದೆ ಮತ್ತು ಪದಮಪಟ್ಟು ನಿಮಿತ್ತರೂ ಆಗುತ್ತಾರೆ. ಅನ್ಯ ಯಾವುದೇ ಶಬ್ದಗಳನ್ನಂತೂ ಹೇಳುವುದಿಲ್ಲ ತಾನೇ! ಶಿಕ್ಷಕಿಯರಾಗುವುದು ಬಹಳ ಒಳ್ಳೆಯದು. ಗದ್ದಿಯಂತೂ ಸಿಗುತ್ತದೆ ಅಲ್ಲವೆ! ದಾದಿ-ದೀದಿಯ ಬಿರುದು ಸಿಕ್ಕಿಬಿಡುತ್ತದೆ ಅಲ್ಲವೆ ಆದರೆ ಜವಾಬ್ದಾರಿಯೂ ಅಷ್ಟೇ ಇರುತ್ತದೆ. ಈ ವರ್ಷದಲ್ಲಿ ಸ್ವಲ್ಪ ನವೀನತೆ ತೋರಿಸಿರಿ. ಪ್ರತಿಜ್ಞೆಯ ಕೈಯನ್ನಂತು ಅನೇಕಬಾರಿ ಮೇಲೆತ್ತಿದ್ದೇವೆ. ಬಹಳ ವರ್ಷಗಳು ಪ್ರತಿಜ್ಞೆಯನ್ನಂತು ಮಾಡಿದ್ದೇವೆ. ಎಂದು ಯೋಚಿಸಬಾರದು. ಇಂತಹ ಸಂಕಲ್ಪಗಳು ಸೂಕ್ಷ್ಮದಲ್ಲಿಯೂ ಬರಬಾರದು. ಅನ್ಯರಿಗಾಗಿಯೂ ಬರಬಾರದು. ಈ ಸಂಕಲ್ಪವೂ ಸಹ ಸಡಿಲ ಮಾಡುತ್ತದೆ. ಇದಂತೂ ನಡೆಯುತ್ತಾ ಬರುತ್ತದೆ. ಇದಂತೂ ಆಗುತ್ತಲೇ ಇರುತ್ತದೆ. ಈ ತರಂಗಗಳೂ ಸಹ ಬಲಹೀನರನ್ನಾಗಿ ಮಾಡುತ್ತದೆ. ಧೃಡ ಸಂಕಲ್ಪ ಮಾಡಿದಾಗ ಸಫಲತೆಯನ್ನು ಅವಶ್ಯವಾಗಿ ಪಡೆಯುತ್ತೀರಿ. ಬಲಹೀನ ಸಂಕಲ್ಪವನ್ನು ಉತ್ಪನ್ನ ಮಾಡಬಾರದು.ಅವುಗಳ ಪಾಲನೆ ಮಾಡುವುದರಲ್ಲಿ ಬಹಳಷ್ಟು ಸಮಯ ವ್ಯರ್ಥವಾಗಿಬಿಡುತ್ತದೆ. ಉತ್ಪತ್ತಿಯಂತು ಬಹಳ ಬೇಗ ಆಗಿಬಿಡುತ್ತವೆ. ಒಂದು ಸೆಕೆಂಡಿನಲ್ಲಿ ನೂರು ವ್ಯರ್ಥ ಸಂಕಲ್ಪ ಉತ್ಪತ್ತಿ ಆಗಿಬಿಡುತ್ತದೆ ಮತ್ತು ಪಾಲನೆ ಮಾಡುವುದರಲ್ಲಿ ಎಷ್ಟೊಂದು ಸಮಯ ಹಿಡಿಸುತ್ತದೆ! ಸಮಾಪ್ತಿ ಮಾಡುವುದರಲ್ಲಂತು ಪರಿಶ್ರಮವಾಗಿಬಿಡುತ್ತದೆ. ಸಮಯವೂ ಹಿಡಿಸುತ್ತದೆ ಮತ್ತು ಬಾಪ್‌ದಾದಾರವರ ವರದಾನ ಅಥವಾ ಆಶೀರ್ವಾದಗಳಿಂದಲೂ ವಂಚಿತರಾಗಿಬಿಡುತ್ತಾರೆ. ಸರ್ವರ ಶುಭ ಭಾವನೆಗಳ ಆಶೀರ್ವಾದಗಳಿಂದಲೂ ವಂಚಿತರಾಗಿಬಿಡುತ್ತಾರೆ. ಶುದ್ಧ ಸಂಕಲ್ಪಗಳಿಂದ ಹೇಗೆ ಬಂಧಿಸಬೇಕು ಅಥವಾ ಮುತ್ತಿಗೆಹಾಕಬೇಕು(ಆಕ್ರಮಣೆ) ಎಂದರೆ ಅದು ಎಲ್ಲರಿಗಾಗಿ ಒಂದು ಛತ್ರಛಾಯೆ ಆಗಬೇಕು. ಯಾರ ಬುದ್ಧಿ ಆದರೂ ಬಲಹೀನವಾಗಿದ್ದರೆ ಅವರಿಗಾಗಿ ಕೂಡ ಈ ಶುದ್ಧ ಸಂಕಲ್ಪಗಳ ಮುತ್ತಿಗೆ ಛತ್ರ ಛಾಯೆಂತೆ ಆಗಬೇಕು. ರಕ್ಷಣೆಯ ಸಾಧನೆಯಾಗಬೇಕು, ಕೋಟೆಯಾಗಬೇಕು, ಶುದ್ಧ ಸಂಕಲ್ಪಗಳ ಶಕ್ತಿಯನ್ನು ಈಗ ಕಡಿಮೆ ಗ್ರಹಿಸಿದ್ದೀರಿ. ಒಂದು ಶುದ್ಧ ಅಥವಾ ಶ್ರೇಷ್ಠ ಶಕ್ತಿಶಾಲಿ ಸಂಕಲ್ಪವು ಯಾವ ಚಮತ್ಕಾರ ಮಾಡಬಹುದು ಎಂಬ ಅನುಭೂತಿಯನ್ನು ಈ ವರ್ಷದಲ್ಲಿ ಮಾಡಿತೋರಿಸಿರಿ. ಮೊದಲು ಈ ಅಭ್ಯಾಸದಲ್ಲಿ ಯುದ್ಧವಾಗುತ್ತದೆ. ಹೇಗೆ ಕೌರವ-ಪಾಂಡವರ ಬಾಣವನ್ನು ತೋರಿಸುತ್ತಾರಲ್ಲವೆ. ಬಾಣವು ಬಾಣವನ್ನು ಮಾರ್ಗದ ಮಧ್ಯೆ ಸಮಾಪ್ತಿ ಮಾಡಿಬಿಡುತ್ತದೆಯೋ ಹಾಗೆಯೇ ವ್ಯರ್ಥ ಸಂಕಲ್ಪ-ಶುದ್ಧ ಸಂಕಲ್ಪವನ್ನು ತುಂಡು ಮಾಡುತ್ತದೆ ಅಂದಮೇಲೆ ಸಂಕಲ್ಪ-ಸಂಕಲ್ಪವನ್ನು ಸಮಾಪ್ತಿ ಮಾಡುವ ಪ್ರಯತ್ನಿಸುತ್ತದೆ ಮತ್ತು ಮಾಡುತ್ತದೆ ಆದರೆ ಧೃಡಸಂಕಲ್ಪ ಇರುವವರ ಜೊತೆಗಾರ ಸ್ವಯಂ ತಂದೆಯವರಾಗಿದ್ದಾರೆ ವಿಜಯದ ತಿಲಕವಂತೂ ಸದಾ ಇದ್ದೇ ಇದೆ. ಈಗ ಇದನ್ನು ಸ್ಮೃತಿಯಲ್ಲಿ ತಂದಾಗ ವ್ಯರ್ಥವು ತಾನಾಗಿಯೇ ಗುಪ್ತವಾಗಿಬಿಡುತ್ತದೆ. ವ್ಯರ್ಥಕ್ಕಾಗಿ ಸಮಯ ಕೊಡುತ್ತೀರಿ. ತುಂಡು ಮಾಡುವುದಿಲ್ಲ ಆದರೆ ಅದರ ರಂಗಿನಲ್ಲಿ ರಂಗಿತರಾಗಿಬಿಡುತ್ತೀರಿ. ಸೆಕೆಂಡಿಗಿಂತಲೂ ಕಡಿಮೆ ಸಮಯದಲ್ಲಿ ತುಂಡು ಮಾಡಿರಿ.

ಶುದ್ಧ ಸಂಕಲ್ಪಗಳಿಂದ ಸಮಾಪ್ತಿ ಮಾಡಿಬಿಡಿ. ಹೀಗೆ ಸರ್ವರ ಶುಭಸಂಕಲ್ಪಗಳ ವಾಯುಮಂಡಲದ ಕೋಟೆಯು ಚಮತ್ಕಾರ ಮಾಡಿತೋರಿಸುತ್ತದೆ. ಆದರೆ ಮೊದಲೇ ಆಗುತ್ತದೆಯೋ ಇಲ್ಲವೋ, ಮಾಡುವುದಂತು ಬಹಳಷ್ಟಿದೆ, ಬಹಳಷ್ಟು ಕೇಳುತ್ತೇವೆ. ಬಹಳ ಚೆನ್ನಾಗಿದೆ ಅನಿಸುತ್ತದೆ ಆದರೆ ಆಗುವುದಿಲ್ಲ ಎಂದು ಯೋಚಿಸಬಾರದು. ಈ ವ್ಯರ್ಥವೂ ಸಹ ವಾಯುಮಂಡಲವನ್ನು ಬಲಹೀನಗೊಳಿಸುತ್ತದೆ. ಆಗಲೇಬೇಕು ಎಂಬ ಧೃಡತೆಯನ್ನಿಡಿ, ಹಾರಿಬಿಡಬೇಕು. ಏನು ಮಾಡಲು ಸಾಧ್ಯವಿಲ್ಲ! ಎಲ್ಲವೂ ಆಗುತ್ತದೆ ಆದರೆ ಮೊದಲು ತಮ್ಮ ಬಗ್ಗೆ ಗಮನವಿರಲಿ ತಮ್ಮ ಗಮನವೇ ಒತ್ತಡವನ್ನು ಸಮಾಪ್ತಿಗೊಳಿಸುತ್ತದೆ. ಏನು ಮಾಡಬೇಕೆಂದು ತಿಳಿಯಿತೆ? ಇದಂತೂ ಆಗುತ್ತಲೇ ಇರುತ್ತದೆ. ಮುಂಚೆಯೂ ಪ್ರತಿಜ್ಞೆ ಮಾಡಿದ್ದೆವು ಎಂದು ಯಾರೇ ಹೇಳುತ್ತಿದ್ದರೆ ಅದನ್ನು ಕೇಳಿಸಿಕೊಳ್ಳಬಾರದು, ಬಲಹೀನತೆಗಳಿಗೆ ಸಹಯೋಗ ಕೊಡಬಾರದು. ಅವರನ್ನು ನಿಮ್ಮ ಜೊತೆಗಾರರನ್ನಾಗಿ ಮಾಡಿಕೊಳ್ಳಿರಿ. ಒಂದುವೇಳೆ ಹಾಗೀಗೆ ಮಾತನಾಡಿದರೆ ಒಬ್ಬರಿನ್ನೊಬ್ಬರಿಗೆ ಶುಭ ನುಡಿಯಿರಿ, ಶುಭ ಚಿಂತನೆ ಮಾಡಿರಿ, ಶುಭ ಕಾರ್ಯ ಮಾಡಿರಿ ಎಂದು ತಿಳಿಹೇಳಿ. ಒಳ್ಳೆಯದು- ಇದರಿಂದ ಎಲ್ಲರೂ ಖುಷಿಯಾಗಿದ್ದೀರಲ್ಲವೆ! ಎಲ್ಲರೊಂದಿಗೆ ಮಾತನಾಡಿದೆನಲ್ಲವೆ! ಇದೂ ಸಹ ತಂದೆಯವರ ಸ್ನೇಹವಾಗಿದೆ. ಸ್ನೇಹದ ಚಿಹ್ನೆಯಾಗಿದೆ- ಅವರು ಸ್ನೇಹಿಯ ಕೊರತೆಯನ್ನು ನೋಡಲು ಸಾಧ್ಯವಿಲ್ಲ ಸ್ನೇಹಿಯ ತಪ್ಪುಗಳನ್ನು ತನ್ನ ತಪ್ಪೆಂದು ತಿಳಿಯುವರು ತಂದೆಯೂ ಸಹ ಮಕ್ಕಳ ಯಾವುದೇ ವಿಷಯಗಳನ್ನು ಕೇಳಿದಾಗ ಅದು ನನ್ನ ವಿಷಯ ಎಂದು ತಿಳಿಯುತ್ತಾರೆ. ಆದ್ದರಿಂದ ಸ್ನೇಹಿಯಾಗಿ, ಸಂಪನ್ನವಾಗಿ, ಸಂಪೂರ್ಣವಾಗಿ, ಸಮಾನರನ್ನಾಗಿ ನೋಡಲು ಬಯಸುತ್ತಾರೆ. **ಎಲ್ಲರೂ ಸ್ನೇಹದಲ್ಲಿ ಒಂದು ಶಬ್ಧವನ್ನಂತು ಬಾಪ್‌ದಾದಾರವರ ಮುಂದೆ ಭಲೆ ಹೃದಯದಿಂದ, ಹಾಡಿನ ಮೂಲಕ, ಶಬ್ದಗಳಿಂದ, ಸಂಕಲ್ಪದಿಂದ ಅವಶ್ಯವಾಗಿ ಹೇಳುತ್ತಾರೆ. ಬಾಪ್‌ದಾದಾರವರು ಎಲ್ಲವನ್ನೂ ಆಲಿಸುತ್ತಾರಲ್ಲವೆ ಎಲ್ಲರೂ ಒಂದು ಮಾತನ್ನಂತು ಬಹಳಷ್ಟು ಬಾರಿ ಹೇಳುತ್ತಾರೆ- ತಂದೆಯವರ ಸ್ನೇಹದ ರಿಟರ್ನ್ ಏನು ಕೊಡಲಿ? ಏಕೆಂದರೆ ಹೇಗಿದ್ದವರು ಹೇಗಾದೆವಲ್ಲವೆ. ಕೋಟಿಯಲ್ಲಿ ಕೆಲವರಂತು ಆಗಿದ್ದೇವಲ್ಲವೆ. ಕೆಲವರಲ್ಲಿ ಕೆಲವರಾಗಿಲ್ಲ. ಅಂದಮೇಲೆ ಕೋಟಿಯಲ್ಲಿ ಕೆಲವರಲ್ಲಿ ಎಲ್ಲರೂ ಉತ್ತೀರ್ಣರಾಗಿದ್ದೀರಿ. ತಂದೆಯವರು ರಿಟರ್ನ್‌ನಲ್ಲಿ ಏನು ಬಯಸುವರು? ತಮ್ಮನ್ನು ಟರ್ನ್(ಪರಿವರ್ತನೆ) ಮಾಡುವುದೇ ರಿಟರ್ನ್ ಕೊಡುವುದಾಗಿದೆ. ಅಷ್ಟೇ. ಇದನ್ನಂತು ಮಾಡಬಹುದಲ್ಲವೆ! ಸ್ನೇಹದಲ್ಲಿ ಇಷ್ಟು ಮಾಡಲು ಸಾಧ್ಯವಿಲ್ಲವೇ! ತೋರ್ಪಡಿಕೆಯ ಸ್ನೇಹವಂತು ಇಲ್ಲವಲ್ಲ! ಸ್ನೇಹದಲ್ಲಿ ತ್ಯಾಗ ಮಾಡುವುದಕ್ಕೂ ತಯಾರಾಗಿದ್ದೀರಾ? ತಂದೆಯು ಏನೇ ಆಜ್ಞೆ ಮಾಡಿದರೂ ತಯಾರಾಗಿದ್ದೀರಾ? ಸ್ನೇಹದಲ್ಲಿ ಎಲ್ಲರೂ ಸಂಪೂರ್ಣವಾಗಿದ್ದೀರಾ ಅಥವಾ ಅಪೂರ್ಣರಾಗಿದ್ದೀರಾ? ತಮ್ಮನ್ನು ಪರಿವರ್ತನೆ ಮಾಡಿಕೊಳ್ಳಲು ತಯಾರಿದ್ದೀರಾ? ಸ್ನೇಹದಲ್ಲಿ ಇದು ತ್ಯಾಗವೇ ಅಥವಾ ಭಾಗ್ಯವಾಗಿದೆಯೇ? ಭಕ್ತರಂತೂ ತಲೆಯನ್ನು ಕತ್ತರಿಸಿಡುವುದಕ್ಕೂ ತಯಾರಾಗುತ್ತಾರೆ. ತಾವು ರಾವಣನ ತಲೆಯನ್ನು ಕತ್ತರಿಸಿಡುವುದಕ್ಕೆ ತಯಾರಿದ್ದೀರಾ?** ಶರೀರದ ತಲೆಯನ್ನಲ್ಲ ಆದರೆ ರಾವಣನ ತಲೆಯನ್ನು ತುಂಡು ಮಾಡಿರಿ! ಐದೂ ತಲೆಗಳನ್ನು ತುಂಡು ಮಾಡಿಡುತ್ತೀರಾ ಅಥವಾ ಒಂದೆರಡನ್ನು ಇಡುವಿರಾ? ಸ್ವಲ್ಪ ಬಲಹೀನತೆಯ ತಲೆಯನ್ನಿಡುತ್ತೀರಾ? ಐದಷ್ಟೇ ಅಲ್ಲ. ಆರನೆಯದಾಗಿ ಬುದ್ಧಿಹೀನತೆಯನ್ನು ತೋರಿಸುತ್ತಾರಲ್ಲವೆ. ಅದನ್ನಿಡುತ್ತೀರಾ? ಒಳ್ಳೆಯದು-

**ನಾಲ್ಕೂ ಕಡೆಯಲ್ಲಿರುವ ಮನಸ್ಸಿನ ವಿಮಾನದಲ್ಲಿ ಹಾರುವಂತಹ ಮಧುಬನ ನಿವಾಸಿ ಅವ್ಯಕ್ತ ರೂಪವುಳ್ಳ ಆತ್ಮರಿಗೆ ಹಾಗೂ ಜೊತೆ-ಜೊತೆಗೆ ಸಂಕಲ್ಪದ ವಿಮಾನದ ಮೂಲಕ ಮಧುಬನಕ್ಕೆ ತಲುಪುವಂತಹ ಶ್ರೇಷ್ಠ ಆತ್ಮರಿಗೆ ಹಾಗೂ ನಾಲ್ಕೂಕಡೆಯಲ್ಲಿರುವ ಸರ್ವಶ್ರೇಷ್ಠ ಸ್ನೇಹಿಯು ಸ್ನೇಹದಲ್ಲಿ ತ್ಯಾಗದ ಭಾಗ್ಯದ ಶ್ರೇಷ್ಠ ಸಂಕಲ್ಪವನ್ನಿಡುವ ಆತ್ಮರಿಗೆ, ಸದಾ ಏ-ವನ್ ಸಂಕಲ್ಪವನ್ನು ಪ್ರತ್ಯಕ್ಷಜೀವನದಲ್ಲಿ ತರುವಂತಹ ತಂದೆಯ ಸಮೀಪ ಆತ್ಮರಿಗೆ, ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ಪ್ರತಿಯೊಬ್ಬರೂ ಭಾರತ ದೇಶ ಅಥವಾ ಭಿನ್ನ-ಭಿನ್ನ ವಿದೇಶದ ಪ್ರತಿಯೊಂದು ಮಕ್ಕಳಿಗೂ ಹೆಸರಿನ ಸಹಿತವಾಗಿ ವಿಶೇಷತೆಯಿಂದ ಕೂಡಿರುವ ನೆನಪು-ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್ 14-04-1994.

***ಸ್ನೇಹದ ರಿಟರ್ನ್ ಆಗಿದೆ ತಮ್ಮನ್ನು ಪರಿವರ್ತನೆ ಮಾಡುವುದು.***

ಬಲಹೀನ ಸಂಕಲ್ಪವನ್ನು ಉತ್ಪನ್ನ ಮಾಡಬಾರದು. ಅದನ್ನು ಪಾಲನೆ ಮಾಡುವುದರಲ್ಲಿ ಬಹಳಷ್ಟು ಸಮಯ ವ್ಯರ್ಥವಾಗಿ ಬಿಡುತ್ತದೆ. ಉತ್ಪತ್ತಿಯಂತೂ ಬಹಳ ಬೇಗ ಆಗಿಬಿಡುತ್ತದೆ ಮತ್ತು ಸಮಾಪ್ತಿ ಮಾಡುವುದರಲ್ಲಿ ಪರಿಶ್ರಮವಾಗಿ ಬಿಡುತ್ತದೆ. ತಮ್ಮ ಶುದ್ಧ ಸಂಕಲ್ಪಗಳನ್ನು ಯಾವ ರೀತಿ ಬಂಧಿಸಬೇಕು ಅಥವಾ ಮುತ್ತಿಗೆ ಹಾಕಬೇಕು ಎಂದರೆ ಅದು ಎಲ್ಲರಿಗೂ ಒಂದು ಛತ್ರಛಾಯೆ ಆಗಬೇಕು. ಯಾರ ಬುದ್ಧಿಯಾದರೂ ಬಲಹೀನವಾಗಿದ್ದರೆ ಅವರಿಗಾಗಿ ಕೂಡ ಆ ಶುದ್ಧ ಸಂಕಲ್ಪಗಳ ಮುತ್ತಿಗೆ ಛತ್ರಛಾಯೆಂತೆ ಆಗಬೇಕು. ರಕ್ಷಣೆಯ ಸಾಧನೆಯಾಗಬೇಕು, ಕೋಟೆಯಾಗಬೇಕು, ಶುದ್ಧ ಸಂಕಲ್ಪಗಳ ಶಕ್ತಿಯಿಂದ ಚಮತ್ಕಾರವನ್ನು ಮಾಡಿ ತೋರಿಸಬಹುದು. ಎಲ್ಲರೂ ಒಂದು ವಿಷಯವನ್ನಂತೂ ಬಹಳಷ್ಟು ಬಾರಿ ಕೇಳುತ್ತಾರೆ ತಂದೆಯವರ ಸ್ನೇಹದ ರಿಟರ್ನ್ ಏನು ಕೊಡಲಿ ಹೇಗಿದ್ದವರು ಹೇಗಾದೆವು, ಕೋಟಿಯಲ್ಲಿ ಕೆಲವರಾಗಿದ್ದೇವೆ ಅಂದಮೇಲೆ ತಂದೆಯವರಿಗೆ ರಿಟರ್ನ್ ನಲ್ಲಿ ಏನು ಕೊಡಬೇಕು ಎಂದು...ತಮ್ಮನ್ನು ಪರಿವರ್ತನೆ ಮಾಡುವುದೇ ರಿಟರ್ನ್ ಕೊಡುವುದಾಗಿದೆ. ಸ್ನೇಹದಲ್ಲಿ ತ್ಯಾಗ ಮಾಡುವುದಕ್ಕೂ ತಯಾರಾಗಿದ್ದೀರಾ? ತಂದೆ ಏನು ಆಜ್ಞೆ ಮಾಡಿದರೆ ಅದಕ್ಕೆ ತಯಾರಾಗಿದ್ದೀರಾ? ಎಲ್ಲರೂ ಸಂಪೂರ್ಣರಾಗಿದ್ದೀರಾ ಅಥವಾ ಅಪೂರ್ಣರಾಗಿದ್ದೀರಾ? ಸ್ನೇಹದಲ್ಲಿ ಪರಿವರ್ತನೆ ಮಾಡಿಕೊಳ್ಳಲು ತಯಾರಾಗಿದ್ದೀರಾ? ಇದು ತ್ಯಾಗವೇ ಅಥವಾ ಭಾಗ್ಯವೇ ಎಂದು ಕೇಳುತ್ತಾ ಶಿವಪರಮಾತ್ಮ ತಿಳಿಸಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಬಾಪ್‌ದಾದಾರವರ ಸ್ನೇಹದ ಭುಜಗಳಲ್ಲಿ ಸಮಾವೇಶವಾಗಿದ್ದೇನೆ.

2. ನಾನು ಸ್ನೇಹ ಎಂಬ ವಿಮಾನದ ಮೂಲಕ ತಂದೆಗೆ ಸಮೀಪವಾಗಿದ್ದೇನೆ.

3. ತಂದೆಯ ಮೇಲಿನ ಸ್ನೇಹದಲ್ಲಿ ನನ್ನನ್ನು ನಾನು ನಂಬರ್ ಒನ್ ಎಂದು ಅನುಭವ ಮಾಡಿದ್ದೇನೆ .

4. ನಾನು ಸ್ನೇಹದಲ್ಲಿ ಪಾಸಾಗಿ ತಂದೆಗೆ ಪಾಸ್(ಸಮೀಪ)ವಾಗಿದ್ದು, ಪ್ರತಿಯೊಂದು ಪರಿಸ್ಥಿತಿಯನ್ನು ಸಹಜವಾಗಿ ಪಾಸ್(ಪಾರು) ಮಾಡುವ ನಿರಂತರ ಸ್ನೇಹಿ.

5. ನಾನು ಎಷ್ಟೇ ದೂರವಿದ್ದರೂ ತಂದೆಯ ಹೃದಯ ಸಿಂಹಾಸನಾಧಿಕಾರಿಯಾಗಿ, ಕಣ್ಮಣಿಯಾಗಿ, ತಂದೆಯ ನಯನಗಳಲ್ಲಿ ಸಮಾವೇಶವಾಗಿದ್ದೇನೆ.

6. ನಾನು ಸ್ವಪರಿವರ್ತನೆಯಲ್ಲಿ, ಅನ್ಯರ ವೃತ್ತಿಯನ್ನು ಪರಿವರ್ತನೆ ಮಾಡುವುದರಲ್ಲಿ, ವಾಯುಮಂಡಲವನ್ನು ಪರಿವರ್ತನೆ ಮಾಡುವುದರಲ್ಲಿ, ಸಂಬಂಧ-ಸಂಪರ್ಕಗಳನ್ನು ಪರಿವರ್ತನೆ ಮಾಡುವುದರಲ್ಲಿ, ತೀವ್ರವಾಗಿರುವ ಪುರುಷಾರ್ಥವನ್ನು ಮಾಡುತ್ತಿದ್ದೇನೆ.

7. ನನ್ನ ಸಂಕಲ್ಪ, ಮಾತು, ಕರ್ಮ ಮೂರು ಸಮಾನವಾಗಿ ಶ್ರೇಷ್ಠವಾಗಿವೆ.

8. ನಾನು ಸಮಯ, ಶ್ವಾಸ, ಮಾತು, ಕರ್ಮದಲ್ಲಿ ವ್ಯರ್ಥದಿಂದ ಅವಿದ್ಯಾ(ಮುಗ್ಧ)ಆಗಿ ಸ್ವತಹವಾಗಿ, ಸಹಜವಾಗಿ ದಿವ್ಯತೆಯನ್ನು ಅನುಭವ ಮಾಡಿದ್ದೇನೆ.

9. ನಾನು ಪುರುಷನಾಗಿ ರಥದ ಮೂಲಕ ಸವಾರಿ ಮಾಡಿಸುತ್ತಿದ್ದೇನೆ ಅರ್ಥಾತ್ ಪುರುಷ ಈ ರಥದಿಂದ ಮಾಡಿಸುತ್ತಿದ್ದಾನೆ ಎಂಬ ಸ್ಮೃತಿಯಲ್ಲಿರುವ ಯಥಾರ್ಥ ಪುರುಷಾರ್ಥಿ.

10. ನಾನು ನನ್ನ ಸ್ವಭಾವ ಸಂಸ್ಕಾರಗಳನ್ನು, ಅಲ್ಪಕಾಲದ ಆಧಾರದ ಆಶ್ರಯಗಳನ್ನು ಬಿಟ್ಟು ಸದಾ ತಂದೆಯ ಆಶ್ರಯದ ಛತ್ರ ಛಾಯೆಯನ್ನು ಅನುಭವ ಮಾಡುತ್ತಿದ್ದೇನೆ.

11. ನಾನು ವಿಷಯಗಳನ್ನು ನೋಡದೆ ತಂದೆಯನ್ನು ನೋಡುತ್ತಾ, ತಂದೆಯ ಸಮಾನ ಕರ್ಮವನ್ನಾಚರಿಸುವ ಬಾಪ್ ಸಮಾನ ಸ್ವರೂಪ.

12. ನಾನು ವ್ಯರ್ಥವನ್ನು ಎದುರಿಸುವುದನ್ನು ಸಮಾಪ್ತಿ ಮಾಡಿ ಪ್ರತ್ಯಕ್ಷ ಫಲವಾಗಿ ಸೇವೆಯ ಅವಕಾಶಗಳನ್ನು ಪಡೆದಿದ್ದೇನೆ.

13. ನಾನು ವಿಧಿಯಿಂದ ಕೂಡಿರುವ ಸದಾಕಾಲದ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಂಡಿದ್ದೇನೆ.

14. ನಾನು ಯಾವ ಕರ್ಮವನ್ನು ಆಚರಿಸುತ್ತೇನೆಯೋ ಅದನ್ನು ನೋಡಿ ಇತರರು ಆಚರಿಸುತ್ತಾರೆ ಎಂಬ ಸ್ಮೃತಿಯಲ್ಲಿದ್ದೇನೆ.

15. ನಾನು ನನ್ನ ಸಂಕಲ್ಪ, ಮಾತು ಮತ್ತು ಕರ್ಮದಲ್ಲಿ ಅಲೌಕಿಕತೆ, ದಿವ್ಯತೆಯಿರುವ ನಂಬರ್ ವನ್ ಅರ್ಜುನನು.

16. ನಾನು ಬಲಹೀನ ಸಂಕಲ್ಪಗಳನ್ನು ಸಮಾಪ್ತಿ ಮಾಡಿ ದೃಢಸಂಕಲ್ಪದಿಂದ ಸಫಲತೆಯನ್ನು ಪಡೆದಿದ್ದೇನೆ.

17. ನನ್ನ ಶುದ್ಧ ಸಂಕಲ್ಪಗಳ ಕೋಟೆ ಅಥವಾ ಮುತ್ತಿಗೆಯು ಬಲಹೀನ ವಾಯುಮಂಡಲ ಮತ್ತು ಆತ್ಮರಿಗೆ ಛತ್ರಛಾಯೆಯಾಗಿ ರಕ್ಷಣೆಯ ಸಾಧನವಾಗಿವೆ.

18. ನಾನು ಶುದ್ಧ ಸಂಕಲ್ಪಗಳ ಮುತ್ತಿಗೆಯಿಂದ ವ್ಯರ್ಥ ಸಂಕಲ್ಪವನ್ನು ಕ್ಷಣದಲ್ಲಿ ತುಂಡು ಮಾಡುವ ವಿಜಯೀ ಸ್ವರೂಪ.

19. ನಾನು ಸ್ವಯಂನ ಮೇಲಿನ ಗಮನದಿಂದ ಒತ್ತಡವನ್ನು ಸಮಾಪ್ತಿ ಮಾಡಿದ್ದೇನೆ.

20. ನಾನು ಬಲಹೀನತೆಗಳ ಸಹಯೋಗ ಕೊಡದೇ ಶುಭವನ್ನು ನುಡಿಯುತ್ತಿದ್ದೇನೆ, ಶುಭ ಚಿಂತನೆ ಮಾಡುತ್ತಿದ್ದೇನೆ, ಶುಭ ಕಾರ್ಯ ಮಾಡುತ್ತಿದ್ದೇನೆ ಮತ್ತು ಎಲ್ಲರಿಗೂ ಮಾಡಲು ತಿಳಿಸುತ್ತಿದ್ದೇನೆ.

21. ನಾನು ಪರಿವರ್ತನೆಯಾಗಿ ಸಂಪೂರ್ಣ ಸಂಪನ್ನವಾಗಿ ತಂದೆಯ ಸ್ನೇಹದ ರಿಟರ್ನ್ ಕೊಟ್ಟಿದ್ದೇನೆ.